## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭೆ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **161 (257)** |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ ಮತ್ತು ಸಕ್ಕರೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | **18-08-2026** |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಸಂಬಂಧ ಸುಮಾರು 15 ಎಕರೆ ಜಾಗವನ್ನು ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಸಿಂಧನೂರು ತಹಶೀಲ್ದಾರರಿಗೆ ಪತ್ರ ಬರೆಯಲಾಗಿದೆಯೇ; | ಸಿಂಧನೂರು ತಾಲ್ಲೂಕಿನಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಸಂಬಂಧ ಸುಮಾರು 15 ಎಕರೆ ಜಾಗವನ್ನು ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಸಿಂಧನೂರು ತಹಶೀಲ್ದಾರರಿಗೆ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ರಾಯಚೂರು ಜಿಲ್ಲೆ ರವರು ಪತ್ರ ಬರೆಯಲಾಗಿದೆ. |
| ಆ) | ಬರೆದಿದ್ದಲ್ಲಿ, ಈ ಸಂಬಂಧ ಯಾವ ಕ್ರಮವಾಗಿದೆ; | ತಹಶೀಲ್ದಾರರು, ಸಿಂಧನೂರು ಇವರು ತಮ್ಮ ಪತ್ರ ದಿನಾಂಕ:03.03.2026 ರಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಭೂ ಮಂಜೂರಾತಿಗಾಗಿ ಯಾವುದೇ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಆದರೆ ಸಿಂಧನೂರು ತಾಲ್ಲೂಕಿನಲ್ಲಿ ಮಾನ್ಯ ಕೇಂದ್ರ ಸರ್ಕಾರದ ಅಧೀನದಲ್ಲಿರುವ CSF (Central Seed Form) ಭೂಮಿ ಸುಮಾರು 7,500 ಎಕರೆಯಷ್ಟು ಇದ್ದು, ಸದರಿ ಭೂಮಿಯಲ್ಲಿ ಲಭ್ಯವಿರುವ ಖಾಲಿ ಜಮೀನಿನಲ್ಲಿ ಮಾನ್ಯ ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದು ಜವಳಿ ಪಾರ್ಕ್ ಅನ್ನು ನಿರ್ಮಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ. |
| ಇ) | ಸಿಂಧನೂರು ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ 'CSF' ನ ಸುಮಾರು 7,500 ಎಕರೆಯಷ್ಟು ಭೂಮಿಯಲ್ಲಿ 15 ಎಕರೆ ಭೂಮಿಯನ್ನು 'ಜವಳಿ ಪಾರ್ಕ್' ನಿರ್ಮಾಣ ಸಂಬಂಧ ಮಂಜೂರು ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಇಲಾಖೆಯಿಂದ ಈಗಾಗಲೇ ಪತ್ರ ಬರೆಯಲಾಗಿದೆಯೇ; | ಸಿಂಧನೂರು ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ 'CSF' ನ ಸುಮಾರು 7,500 ಎಕರೆಯಷ್ಟು ಭೂಮಿಯಲ್ಲಿ 15 ಎಕರೆ ಭೂಮಿಯನ್ನು 'ಜವಳಿ ಪಾರ್ಕ್' ನಿರ್ಮಾಣ ಸಂಬಂಧ ಮಂಜೂರು ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಜಮೀನಿನ ಸಂಪೂರ್ಣ ವಿವರಗಳನ್ನು ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿದ್ದು, ವಿವರಗಳನ್ನು ನಿರೀಕ್ಷಿಸಲಾಗಿದೆ. |
| ಈ) | ಬರೆದಿದ್ದಲ್ಲಿ, ಈ ಸಂಬಂಧ ಯಾವ ಕ್ರಮವಾಗಿದೆ; | ಅನ್ವಯಿಸುವುದಿಲ್ಲ. |
| ಉ) | ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕಿನಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುವುದು? | ಸಿಂಧನೂರು ತಾಲ್ಲೂಕಿನಲ್ಲಿ CSF (Central Seeds Form) ಜಮೀನನ್ನು ಇಲಾಖೆಗೆ ಮಂಜೂರು ಮಾಡಿದ್ದಲ್ಲಿ ಪಾರ್ಕ್ ಸ್ಥಾಪಿಸಲು ನಿಯಮಾನುಸಾರ ಪರಿಶೀಲಿಸಲಾಗುವುದು. |

ಸಂಖ್ಯೆ: **CI 201 JAKE 2026**

(ರುದ್ರಪ್ಪ ಮಾನಪ್ಪ ಲಮಾಣಿ)
ಜವಳಿ ಮತ್ತು ಸಕ್ಕರೆ ಸಚಿವರು